# ಕೊರ್ಸೆಟ್ ಡ್ರೆಸ್ ಟ್ರೆಂಡ್

**ಕೊರ್ಸೆಟ್ ಉಡುಪು ಈಗ ಎಲ್ಲರ ಫೇವರೆಟ್. ವಿವಾಹ ಸಮಾರಂಭಗಳಿಂದ ಹಿಡಿದು ಕಚೇರಿ ದಿರಿಸಿಗೂ ಕೊರ್ಸೆಟ್ ಹೊಂದಿಕೊಳ್ಳುವುದರಿಂದ ಬಹುತೇಕ ಲಲನೆಯರ ಮನ ಕದ್ದಿದೆ.**

■ ಸುಮಾ ಬಿ.



'ಶಂಶೇರಾ' ಸಿನಿಮಾ ಪ್ರಚಾರಕ್ಕಾಗಿ ಈಚೆಗೆ ಟಿ.ವಿ. ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಬಾಲಿವುಡ್ ನಟಿ ವಾಣಿ ಕಪೂರ್ 'ಕೊರ್ಸೆಟ್ ಡ್ರೆಸ್'ನಲ್ಲಿ ಮಿಂಚಿದರು. ಫ್ಯಾಷನ್‌ಗೆ ಹೆಚ್ಚು ಒತ್ತು ಕೊಡುವ ಅವರು ಈ ಬಾರಿ ಕೊರ್ಸೆಟ್ ಟ್ರೆಂಡ್ ಅನುಸರಿಸುವ ಮೂಲಕ ಸುದ್ದಿಯಲ್ಲಿದ್ದಾರೆ. ಸಿಲ್ವರ್ ಬಣ್ಣದ ಕೊರ್ಸೆಟ್‌ಗೆ ಪಿಂಕ್ ಪ್ಯಾಂಟ್ (ತಿಳಿ ಗುಲಾಬಿ ಬಣ್ಣ) ತೊಟ್ಟು ಸ್ಟೈಲಿಷ್‌ಆಗಿ ಕಾಣಿಸಿಕೊಂಡಿದ್ದರು. ಈಗ ಕೊರ್ಸೆಟ್ ಉಡುಪಿನ ಅವರ ಚಿತ್ರಗಳು ವೈರಲ್ ಆಗಿವೆ.

ಅಂದ ಹಾಗೆ ಕೊರ್ಸೆಟ್ ಉಡುಪು ಈಗ ಎಲ್ಲರ ಫೇವರೆಟ್. ವಿವಾಹ ಸಮಾರಂಭಗಳಿಂದ ಹಿಡಿದು ಕಚೇರಿ ದಿರಿಸಿಗೂ ಕೊರ್ಸೆಟ್ ಹೊಂದಿಕೊಳ್ಳುವುದರಿಂದ ಬಹುತೇಕ ಲಲನೆಯರ ಮನ ಕದ್ದಿದೆ. ಸ್ಲಿಮ್ ಹಾಗೂ ಗ್ಲಾಮರಸ್ ಲುಕ್ ನೀಡುವ ಕೊರ್ಸೆಟ್ ಬಾಲಿವುಡ್ ನಟಿಯರ, ರೂಪದರ್ಶಿಯರ ನೆಚ್ಚಿನ ಆಯ್ಕೆಯಾಗಿದೆ. ಇದಲ್ಲದೆ ಮದುವೆ, ಆರತಕ್ಷತೆಗೆ ಮಧುಮಗಳ ಆಯ್ಕೆಯಲ್ಲಿಯೂ ಕೊರ್ಸೆಟ್ ಸ್ಥಾನ ಪಡೆದಿದೆ.

ಸಾಂಪ್ರದಾಯಿಕ ದಿರಿಸಿಗೂ ಸೈ, ದಿನನಿತ್ಯದ ಉಡುಪಿಗೂ ಜೈ ಎನ್ನುವ ಕೊರ್ಸೆಟ್ ಫ್ಯಾಷನ್ ಪ್ರಿಯರ ವಾರ್ಡ್‌ರೋಬ್‌ಗಳಲ್ಲಿ ಸ್ಥಾನ ಪಡೆದಿದೆ. ಸಾಂಪ್ರದಾಯಿಕ ಹಾಗೂ ಆಧುನಿಕ ವಿನ್ಯಾಸಗಳ ಮಿಶ್ರಣದಂತಿರುವ ಕೊರ್ಸೆಟ್ ಎಲ್ಲ ಬಗೆಯ ಉಡುಪುಗಳಿಗೂ ಹೊಂದಿಕೊಳ್ಳುತ್ತದೆ. ಸೀರೆ, ಲೆಹೆಂಗಾ, ಪಲಾಜೊ ಪ್ಯಾಂಟ್, ಜೀನ್ಸ್, ಪೆನ್ಸಿಲ್ ಕಟ್ ಪ್ಯಾಂಟ್ ಹೀಗೆ ಎಲ್ಲ ಬಗೆಯ ಉಡುಪುಗಳೊಂದಿಗೆ ಮ್ಯಾಚ್ ಮಾಡಿಕೊಳ್ಳಬಹುದು.

ಹೊಸದಾಗಿ ಕೇಳುವವರಿಗೆ ಏನಿದು ಕೊರ್ಸೆಟ್ ಎಂದು ಹುಬ್ಬೇರಿಸಬಹುದು. ಎದೆಯ ಕೆಳಭಾಗದಿಂದ ಸೊಂಟದವರೆಗೆ ವಿಸ್ತರಿಸುವ ಬಿಗಿಯಾದ ಉಡುಪು ಎಂದು ವ್ಯಾಖ್ಯಾನಿಸಬಹುದು. ಲಲನೆಯರ ಸೊಂಟದ ಆಕೃತಿಯನ್ನು ಬಿಗಿಯಾಗಿಸಿ ಇನ್ನಷ್ಟು ಅಂದಗೊಳಿಸುವ ಈ ಉಡುಪು, ಹೊಟ್ಟೆ ತುಸು ಮುಂದೆ ಬಂದಿದ್ದರೆ ಅದನ್ನು ಅಡಗಿಸಿ ಸ್ಲಿಮ್ ಆಗಿ ಕಾಣಲು ಸಹಕರಿಸುತ್ತದೆ.

ದೊಗಲು ದೊಗಲಾದ ಟಾಪ್ ಧರಿಸಿ ಅದರ ಮೇಲೆ ಕೊರ್ಸೆಟ್ ಧರಿಸುವಿಕೆಯೂ ಈಗ ಟ್ರೆಂಡ್ ಆಗುತ್ತಿದೆ. ಸೊಂಟದ ಸುತ್ತ ಇರುವ ಬೊಜ್ಜು ಕರಗಿಸಲೂ ಬಹುತೇಕರು ಈ ಉಡುಪುಗಳನ್ನು ಬಳಸುತ್ತಾರೆ. ಇದಕ್ಕೆಂದೇ ಮಾರುಕಟ್ಟೆಯಲ್ಲಿ ಕೊರ್ಸೆಟ್ ಬೆಲ್ಟ್ ಕೂಡ ಲಭ್ಯ ಇವೆ. ಅವುಗಳನ್ನು ಮಾಮೂಲಿ ಟಾಪ್ ಮೇಲು ಧರಿಸಬಹುದು.

ಇನ್ನು ಒಳ ಉಡುಪಾಗಿಯೂ ಕಾರ್ಸೆಟ್ ಹೆಂಗಳೆಯರ ಮನ ಸೆಳೆದಿದೆ. ಎದೆ ಮಟ್ಟದಿಂದ ಸೊಂಟದವರೆಗೆ ಸ್ಲಿಮ್ ಆಗಿರಿಸುವ ಕೊರ್ಸೆಟ್ ಬ್ರಾಗಳನ್ನೂ ವಿನ್ಯಾಸಕರು ಸಿದ್ಧಗೊಳಿಸಿದ್ದಾರೆ. ಕೈಗೆಟಕುವ ದರದಲ್ಲೇ ಇವು ಲಭ್ಯ ಇದ್ದು, ಫ್ಯಾಷನ್ ಪ್ರಿಯರು ಮಾತ್ರವಲ್ಲದೆ ದೇಹವನ್ನು ಫಿಟ್ ಆಗಿರಿಸುವ ಇಚ್ಛೆಯುಳ್ಳವರೆಲ್ಲರೂ ಅವುಗಳ ಅನುಭೂತಿ ಪಡೆಯಬಹುದು. ನೈಸರ್ಗಿಕವಾಗಿ ಸೊಂಟವನ್ನು ಸಂಕುಚಿತಗೊಳಿಸುವುದು ಈ ಉಡುಪಿನ ವಿಶೇಷ.

ಸ್ಥೂಲ ಕಾಯದವರಿಗೆ ಕೊರ್ಸೆಟ್ ಅಷ್ಟಾಗಿ ಹೊಂದಿಕೆಯಾಗುವುದಿಲ್ಲವಾದರೂ ಅವರಿಗೆಂದೇ ವಿಶೇಷ ಉಡುಪುಗಳೂ ಮಾರುಕಟ್ಟೆಯಲ್ಲಿ ಲಭ್ಯ ಇವೆ. ಅವುಗಳನ್ನು ತೊಟ್ಟು ಬೀಗಬಹುದು. ತೆಳುವಾಗಿರುವವರಿಗೆ ಕೊರ್ಸೆಟ್ ಉಡುಪು ಹೇಳಿ ಮಾಡಿಸಿದಂತಿರುತ್ತದೆ. ಈ ಉಡುಪು ದೇಹಕ್ಕೆ ಬಿಗಿಯಾಗಿ ಅಪ್ಪಿಕೊಳ್ಳುವುದರಿಂದ ಕೆಳಭಾಗದಲ್ಲಿ ನಿರಿಗೆಯುಳ್ಳ ಹಾಗೂ ಪರದೆಯಂತಹ ವಿನ್ಯಾಸದ ಉಡುಗೆಗೆ ಹೆಚ್ಚು ಹೊಂದಿಕೆಯಾಗುತ್ತದೆ.

**ಕಾರ್ಸೆಟ್ ರವಿಕೆ!**

ರವಿಕೆಯಾಗಿಯೂ ಕೊರ್ಸೆಟ್